ಕಥೆ

# ಘ್ರಾಣ



**ರಾಜಕುಮಾರ ಕುಲಕರ್ಣಿ**

ಕಲೆ: ಸಂತೋಷ್ ಸಸಿಹಿತ್ಲು

ಬೆಳಗ್ಗೆ ಹಾಸಿಗೆಯಿಂದ ಎದ್ದು ನಿತ್ಯದ ಪ್ರಾತರ್ವಿಧಿಗಳನ್ನು ಮುಗಿಸಿ ಅಡುಗೆಮನೆಗೆ ಚಹಾ ಕುಡಿಯಲೆಂದು ಬಂದ ಚಿದಂಬರನ ಮೂಗಿಗೆ ವಿಚಿತ್ರ ವಾಸನೆಯೊಂದು ಆವರಿಸಿ ಹೆಂಡತಿ ವಿಶೇಷ ತಿಂಡಿ ಮಾಡುತ್ತಿರಬಹುದೆಂದು ಭಾವಿಸಿ ಕಿಚನ್ ಕಟ್ಟೆಯ ಕಡೆಗೆ ದೃಷ್ಟಿ ಬೀರಿದವನ ಕಣ್ಣಿಗೆ ಕುದಿಯುತ್ತಿರುವ ಚಹಾದ ಮಾಮೂಲಿ ದೃಶ್ಯದ ಹೊರತು ಬೇರೇನೂ ಗೋಚರಿಸದೆ ವಾಸನೆ ಎಲ್ಲಿಂದ ಬರುತ್ತಿದೆ ಎನಿಸಿ ಅಚ್ಚರಿಯಾಯಿತು. ವಾಸನೆಯನ್ನು ಆಘ್ರಾಣಿಸುತ್ತ ಸ್ವಲ್ಪ ಹೊತ್ತು ಹಾಗೆ ನಿಂತವನು ಇವತ್ತು ತನ್ನ ಮೂಗನ್ನು ಆವರಿಸಿರುವ ಈ ವಾಸನೆಯ ಅನುಭವ ಹಿಂದೆ ಎಂದಾದರೂ ತನಗಾಗಿದೆಯೇ ಎಂದು ನೆನಪಿಸಿಕೊಂಡವನಿಗೆ ಮೊದಲಬಾರಿಗೆ ಇಂಥದ್ದೊಂದು ವಿಚಿತ್ರ ಅನುಭವಕ್ಕೆ ತಾನು ಒಳಗಾಗಿರುವುದು ಅರಿವಾಗಿ ಚಿದಂಬರನ ಮೈ ಜುಮ್ಮೆಂದು ರೋಮಗಳೆಲ್ಲ ಎದ್ದುನಿಂತವು.

ಗಂಡ ಬಂದು ಬಹಳ ಹೊತ್ತಾದರೂ ಚಹಾಕ್ಕೆ ಅವಸರಿಸದೆ ಇದೇ ಮೊದಲ ಬಾರಿಗೆ ಅಡುಗೆ ಮನೆಯನ್ನು ನೋಡುತ್ತಿರುವನೇನೋ ಎನ್ನುವಂತೆ ಮುಖದ ಮೇಲೆ ಅಚ್ಚರಿಯ ಕಳೆ ಹೊತ್ತು ನಿಂತ ಚಿದಂಬರನ ಕಡೆ ದೃಷ್ಟಿ ಹರಿಸಿದ ಪದ್ಮಾವತಿ 'ಅಂಥಾ ಪರಿ ಬಾಯ್ತೆರದು ನಿಂದ್ರಲಿಕ್ಕೆ ಯಾವತ್ತೂ ಅಡುಗಿಮನಿ ನೋಡಿಲ್ಲೇನು. ಜೀವನದಾಗ ಇದೇ ಫಸ್ಟ್ ಟೈಮ್ ನೋಡ್ಲಿಕತ್ತಂಗ ಮುಖಾ ಮಾಡಿ ನಿಂತಿರಲ್ಲ... ನಿಮ್ಮನ್ನು ನೋಡಿ ಯಾರಾದರೂ ಹೆದರಿಕೊಂಡಾರು. ಮತ್ತೆನರ ಯುನಿವರ್ಸಿಟಿನಾಗ ಭಾನಗಡಿ ಆಗ್ಯಾದೇನು. ಇಲ್ಲದ ವಿಷಯ ತಲಿಗಿ ಹಚಗೊಂಡು ಸುಮ್ನ ಕೊರಗೋದೆ ಆಯ್ತು. ಕಟಗೊಂಡು ಹತ್ತ ವರ್ಷಾಯ್ತು. ಇದೇ ಅನುಭವಿಸೊದು ಆಗ್ಯಾದ. ಸ್ವಲ್ಪ ಬ್ಯಾರೆ ಮಂದಿ ಹ್ಯಾಂಗ ಆರಾಮಾಗಿ ಜೀವನ ಮಾಡ್ಲಿಕತ್ತಾರ ನೋಡಿ ಕಲೀರಿ' ಎಂದು ಸಿಟ್ಟಿನಿಂದ ನುಡಿದು ಬಿಸಿಬಿಸಿ ಚಹಾದ ಕಪ್ಪನ್ನು ಅವನ ಕೈಗಿಟ್ಟು ಪಾತ್ರೆಯನ್ನು ಕುಕ್ಕಿ ಅವಳು ಅಡುಗೆಮನೆಯಿಂದ ಹೊರಗೆ ಹೋದ ಸದ್ದಿಗೆ ಚಿದಂಬರ ವಾಸ್ತವಕ್ಕೆ ಮರಳಿದ. ಅಚ್ಚರಿ ಎನ್ನುವಂತೆ ಪದ್ಮಾವತಿ ಹೊರಗೆ ಹೋದದ್ದೆ ಆ ವಿಚಿತ್ರ ವಾಸನೆ ಕೂಡ ಅವಳ ಹಿಂದೆಯೆ ಹೋದಂತೆ ಭಾಸವಾಗಿ ಈಗ ಅಡುಗೆಮನೆಯಲ್ಲಿ ತನಗೆ ದಿನನಿತ್ಯ ಎದುರಾಗುತ್ತಿದ್ದ ಅಡುಗೆಯ ಪರಿಮಳವೇ ಮೂಗನ್ನು ಆವರಿಸಿ ಅವನಿಗೆ ಎಲ್ಲವೂ ಅಯೋಮಯ ಅಗೋಚರ ಎನಿಸತೊಡಗಿತು.

* * *

ಚಿದಂಬರಾಧೀಶ ಗುರುರಾಜರಾವ್ ದೇಶಪಾಂಡೆ ಯಾನೆ ಚಿದಂಬರ, ಕಲಬುರಗಿ ವಿಶ್ವವಿದ್ಯಾಲಯದ ಆಡಳಿತ ಭವನದಲ್ಲಿ ಎರಡನೆ ದರ್ಜೆ ಗುಮಾಸ್ತನಾಗಿ ಕಳೆದ ಇಪ್ಪತ್ತು ವರ್ಷಗಳಿಂದ ಕೆಲಸ ಮಾಡುತ್ತಿರುವ ಮಧ್ಯಮ ವರ್ಗದ ಕುಟುಂಬಕ್ಕೆ ಸೇರಿದ, ಜಗಳ-ತಂಟೆ ಎಂದು ಯಾವ ಉಸಾಬರಿಗೂ ಹೋಗದೆ ತಾನಾಯಿತು ತನ್ನ ಕೆಲಸವಾಯಿತು ಎನ್ನುವಂತೆ ಬದುಕುತ್ತಿರುವ ನಿರುಪದ್ರವಿಜೀವಿ. ಪಿಯುಸಿ ನಂತರ ಮುಂದೆ